ಡಚ್ ನೆರವಿನಲ್ಲಿ ಒದಗಿಸಿದ ಸಾಲ ಸೌಲಭ್ಯಗಳು

		ಫಲಾನುಭವಿಗಳು	ರೂಪಾಯಿಗಳಲ್ಲಿ
೧	ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಎ)	೧	೪೭,೮೦೦–೦೦
೨	ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಬಿ)	೧	೪೨,೩೫೦–೦೦
೩	ರೀಲಿಂಗ್‌ಷಡ್	೧	೨೪,೫೦೦–೦೦
೪	ವಾಸ ಮತ್ತು ಹುಳು ಸಾಕುವ ಮನೆ	೪	೭೬,೮೦೦–೦೦
೫	ಹುಳು ಸಾಕುವ ಮನೆ	೬	೯೭,೨೦೦–೦೦
	ಒಟ್ಟು	೧೩	೨,೮೮,೬೫೦–೦೦

ಇಲಾಖೆಯ ಚಾಕಿ ಸಾಕಾಣಿಕೆ ಕೇಂದ್ರ ಹೆಚ್. ರಂಗಾಪುರ ರೂ. ೫೩,೦೦೪–೦೦

ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಸಿಮೆಂಟ್ ಕಾರ್ಖಾನೆ ಆರಂಭವಾಗುವ ಬಗ್ಗೆ

೧೫೨. ಶ್ರೀ ಜಿ. ರಾಮದಾಸ್.—ಮಾನ್ಯ ಭಾರಿ ಪರಿಸರ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಆರಂಭವಾಗಲಿರುವ ಸಿಮೆಂಟ್ ಕಾರ್ಖಾನೆಯಿಂದ ತೆಂಗಿನ ಬೆಳೆ ಹಾಗೂ ರೈತರಿಗೆ ಹಾನಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅಪಾರ ತೆಂಗಿನ ವನದ ಮಧ್ಯೆ ಧೂಳುಕಾರುವ ಸಿಮೆಂಟ್ ಕಾರ್ಖಾನೆಯ ಆರಂಭಕ್ಕೆ ಸರ್ಕಾರದವರು ಅನುಮತಿ ನೀಡಿರುವುದು ಸರಿಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಹಾನಿಯಾಗದಂತೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು ?

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಈ ಪ್ರದೇಶದಲ್ಲಿ ಕಾರ್ಖಾನೆಗಳು ಚಿಕ್ಕ ಪ್ರಮಾಣದಾಗಿದ್ದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಿಗೆ ಪಡೆದಿವೆ. ಮತ್ತು ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸೂಚಿಸಿರುವ ಕ್ರಮಗಳನ್ನು ಕೈಗೊಂಡಿದ್ದಾರೆ.

ಆ) ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಮನ್ನಣೆ ಪಡೆದ ನಂತರವೇ ಕೈಗಾರಿಕೆಗಳಿಗೆ ಅನುಮತಿ ನೀಡಿದೆ.

ಇ) ಸ್ಥಳೀಯ ಗಣ್ಯ ನಾಗರೀಕರು ಮತ್ತು ಉದ್ದಿಮೆದಾರರ ನಡುವೆ ಆಗಿರುವ ಒಪ್ಪಂದದ ಪ್ರಕಾರ ಉದ್ದಿಮೆದಾರರು ಸ್ಥಳೀಯ ಪಂಚಾಯಿತಿಗೆ ಪ್ರತಿ ವರ್ಷವೂ ಪರಿಹಾರ ಧನವನ್ನು ನೀಡುವುದೂ ಅಲ್ಲದೆ ತೆಂಗಿನ ಬೆಳೆಗೆ ಹಾನಿಯಾದ ಪಕ್ಷದಲ್ಲಿ ಒಪ್ಪಂದದ ಪ್ರಕಾರ ಪರಿಹಾರವಾಗಿ ಧನವನ್ನು ನೀಡುತ್ತದೆ.

ನಂದಿ ಹೆಸ್ಸಿ ಟೆಕ್ಸ್‌ಟೈಲ್ಸ್ ಬಗ್ಗೆ

೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.–

ಅ) ನಂದಿ ಮತ್ತು ಹೆಸ್ಸಿ ಟೆಕ್ಸ್‌ಟೈಲ್ ಮಿಲ್ಸ್ ಲಿ. ನರಗುಂದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಇಂಡಸ್ಟ್ರಿಯಲ್ ಅಂಡರ್‌ಟೇಕಿಂಗ್ ಕಾನೂನಿನ ೪(೨)ನೇ ವಿಧಿಯ ಅನ್ವಯ ಒಂದು ಪ್ರಕಟನೆ ಹೊರಡಿಸಿರುವುದು ನಿಜವೆ ?

ಆ) ವಿಲ್ಲಿನ ವಿಷಯದಲ್ಲಿ ಡೈರೆಕ್ಟರು ಸರ್ಕಾರಕ್ಕೂ ಕಂಪನಿ ರಿಜಿಸ್ಟ್ರಾರ್‌ಗೂ ಮ್ಯಾನೇಜಿಂಗ್ ಡೈರೆಕ್ಟರ್ ಹಣದ ಅಪರ ತಪರ ಮಾಡಿ ಈ ವಿಲ್ಲಿನ ಮುಚ್ಚುವಿಕೆಗೆ ಕಾರಣರಾಗಿದ್ದಾರೆಂದು ಹಾಗೂ ಈ ವಿಷಯದಲ್ಲಿ ಸರಕಾರವು ಕೈಹಾಕಿ ಅವರಿಗೆ ರಕ್ಷಣೆ ಕೊಡಬಾರದೆಂದು ತಿಳಿಸಿರುವುದು ನಿಜವೆ?

ಇ) ಸಿಂಡಿಕೇಟ್ ಬ್ಯಾಂಕಿನವರು ಈ ವಿಲ್ಲಿನ ವಿಷಯದಲ್ಲಿ ಹಣ ತೆಗೆದುಕೊಂಡು ಒಟ್ಟು ಮೋಟಾರುಗಳನ್ನು ಸೃಷ್ಟಿಸಿ ೩೫ ಲಕ್ಷ ರೂಪಾಯಿಗಳಷ್ಟು ಹಣವನ್ನು ದುರುಪಯೋಗ ಮಾಡಿ ಬ್ಯಾಂಕಿನ ಹಣಕ್ಕೆ ಖೋತಾ ಮಾಡಿರುವುದಾಗಿ ಸಿವಿಲ್ ಹಾಗೂ ಕ್ರಿಮಿನಲ್ ಕೇಸುಗಳನ್ನು ನಡೆಸುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ ಹೈಕೋರ್ಟಿನಲ್ಲಿ ಕಂಪನಿಯ ಬಗ್ಗೆ ಲಿಕ್ವಿಡೇಷನ್ ಮಾಡಲು ಕಂಪನಿ ಕಾನೂನಿನ್ವಯ ಅರ್ಜಿ ಮಾಡಿರುವರೆ. ಈ ಪ್ರಕರಣಗಳಲ್ಲಿ ಇನ್ನೂ ಹೈಕೋರ್ಟಿನಲ್ಲಿದ್ದಾಗಲೂ ಹಣವಂತರಾದ ಈ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ರಕ್ಷಣೆ ಕೊಡಲು ಕೆಲವು ಡೈರೆಕ್ಟರ್ ಅಭಿಪ್ರಾಯಕ್ಕೆ ವಿರುದ್ಧವಾಗಿ ರಕ್ಷಣೆ ಕೊಡಲಂ ಮುಂದೆ ಬಂದಿರುವುದು ಯಾವ ಉದ್ದೇಶದಿಂದ ಇದರಲ್ಲಿ ಲಂಚದ ಪ್ರಕರಣವೇನಾದರೂ ಅಡಗಿದೆಯೇ, ಸರ್ಕಾರದವರು ಉಳಿದ ಉದ್ದಿಮೆಗಳಿಗೆ ಈ ತೆರನಾದ ಸೌಲಭ್ಯ ಕಲ್ಪಿಸಲು ಏಕೆ ಮುಂದಾಗಲಿಲ್ಲ?

ಉ) ವಿಲ್ಲಿನ ವಿಷಯದಲ್ಲಿ ಈ ನೋಟಿಫಿಕೇಷನ್ ನಂ. ಸಿಐ ೮೦ ಪಿಯುಎಂ ೮೫ (೧) ಮತ್ತು ಸಿಐ ೮೦ ಪಿಯುಎಂ ೮೫ (೨) ದಿನಾಂಕ ೯ನೇ ಡಿಸೆಂಬರ್ ೧೯೮೫ರಲ್ಲಿ ೭ನೇ ಕಾಲವಿನಲ್ಲಿ ಸರ್ಕಾರಿ ನಾಮಂಕರಣ ಮಾಡಿದ ಡೈರೆಕ್ಟರ್ ಹೊರತಾಗಿ ಉಳಿದ ಡೈರೆಕ್ಟರ್ ವೈಯುಕ್ತಿಕ ಹೊಣೆ ಹೊರಲು ಕರಾರು ಹಾಕಿರುವುದು ನಿಜವೆ?

ಶ್ರೀ ಜೆ.ಹೆಚ್. ಪಟೇಲ್(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು.).—

ಅ) ಹೌದು

ಆ) ಹೌದಂ

ಇ) ಇಲ್ಲ

ಈ) ಸಿಂಡಿಕೇಟ್ ಬ್ಯಾಂಕಿನವರು ರಾಜ್ಯ ಶ್ರೇಷ್ಟಿ ನ್ಯಾಯಾಲಯದಲ್ಲಿ ಲಿಕ್ವಿಡೇಷನ್ ಮಾಡಲಂ ಕಂಪನಿ, ಕಾನೂನು ರೀತ್ಯ ಅರ್ಜಿ ಸಲ್ಲಿಸಿದ್ದರು. ಮ್ಯಾನೇಜಿಂಗ್ ಡೈರೆಕ್ಟರ್‌ಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಸೌಲಭ್ಯ ನೀಡಿಲ್ಲ. ಬಡ ಕಾರ್ಮಿಕರ ಹಿತ ದೃಷ್ಟಿಯಿಂದ ಕೊಡಲಾಗಿದೆ. ಈ ಕಾನೂನಿನ ರೀತ್ಯ ಕೆಲವು ಉದ್ದಿಮೆಗಳಿಗೆ ಅವಶ್ಯವಿದ್ದಲ್ಲಿ ಮಾತ್ರ ಈ ಸೌಲಭ್ಯ ನೀಡಲಾಗಿದೆ.

ಉ) ಹೌದಂ

ವಂಗಳೂರಿನಲ್ಲಿ ಸ್ಥಾಪನೆಯಾಗುವ ತೈಲ ಶುದ್ಧೀಕರಣಗಾರಕ್ಕೆ ಬೇಕಾಗುವ ವಿದ್ಯುತ್ ನೀರು ಮೊದಲಾದ ಮೂಲಭೂತ ಅವಶ್ಯಕತೆಗಳ ಬಗ್ಗೆ.

೪೩೦ **ಶ್ರೀ ಬಿ. ಎಂ. ಇದಿನಬ್ಬ** (ಉಳ್ಳಾಲ).— ಮಾನ್ಯ ಭಾರಿ ಮಂತ್ರಿ ಮಧ್ಯಮ ಕೈಗಾರಿಕಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಂಗಳೂರಿನಲ್ಲಿ ಸ್ಥಾಪನೆಯಾಗುವ ತೈಲ ಶುದ್ಧೀಕರಣಗಾರಕ್ಕೆ ಬೇಕಾಗುವ ವಿದ್ಯುತ್, ನೀರು ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ರಾಜ್ಯ ಸರ್ಕಾರದವರು ಪೂರೈಸುವರೇ?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಹೌದು.